4) ಇಲ್ಲ.

5) ಇಲ್ಲ.

6) ಈಗಿರುವ ವ್ಯವಸ್ಥೆಯಲ್ಲಿಯೇ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತದೆ.

ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ತೆನಿಕೊಳ್ಳ ಪ್ರವಾಸಿ ಕೇಂದ್ರದಲ್ಲಿರುವ ರಂಗಮಂಟಪವನ್ನು ಪೂರ್ಣಗೊಳಿಸುವುದು.

2233 (2703) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) :— ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಜ್ಯ ಸಚಿವೆಯರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ರಂಗಮಂಟಪಗಳನ್ನು ಕಟ್ಟಲು ಎಷ್ಟು ಹಣವನ್ನು ಒದಗಿಸಲಾಗಿದೆ.

ಆ) ರಾಜ್ಯದಲ್ಲಿ ಎಷ್ಟು ರಂಗಮಂಟಪಗಳು ಅರ್ಧಕ್ಕೆ ಕಟ್ಟಿ ನಿಲ್ಲಿಸಲಾಗಿದೆ.

ಇ) ಬೆಳಗಾವಿ ಜಿಲ್ಲೆ ಸವದತ್ತಿ ತಾಲೂಕಿನ ತೆನಿಕೊಳ್ಳ ಪ್ರವಾಸಿ ಕೇಂದ್ರದಲ್ಲಿ ರಂಗಮಂಟಪ ಕಟ್ಟಡವು ಅರ್ಧಕ್ಕೆ ನಿಂತ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ತೆನಿಕೊಳ್ಳ ಪ್ರವಾಸಿ ಕೇಂದ್ರದಲ್ಲಿ ಕಟ್ಟಲಾಗಿತ್ತಿರುವ ರಂಗಮಂಟಪಕ್ಕೆ 2.50 ಲಕ್ಷ ರೂ.ಗಳಿಗೆ ಮಂಜೂರಾತಿಯನ್ನು ನೀಡಲಾಗಿದ್ದು ಅದಕ್ಕೆ ಈಗ ಕೇವಲ 50,000-00 ರೂ.ಗಳನ್ನು ಬಿಡುಗಡೆಗೊಳಿಸಿರುವ ಸಂಗತಿ ನಿಜವೇ?

ಉ) ಹಿಂದಿನ ಲೋಕ ಸಭಾ ಸದಸ್ಯರು ಈ ಕಟ್ಟಡಕ್ಕೆ ತಮ್ಮ ಸಂಸದರ ನಿಧಿಯಲ್ಲಿ 2.00 ಲಕ್ಷ ರೂ.ಗಳನ್ನು ಬಿಡುಗಡೆ ಮಾಡುವುದಕ್ಕಾಗಿ ಸರ್ಕಾರಕ್ಕೆ ಪತ್ರ ಬರೆದಿದ್ದು, ಆದರೆ ಅವರು ತಮ್ಮ ಸಂಸದರ ಅಧಧಿಯಲ್ಲಿ ಸದರಿ ಹಣವನ್ನು ಬಿಡುಗಡೆ ಮಾಡದೇ ಇರುವುದರಿಂದ ಈ ಕಟ್ಟಡ ಅರ್ಧಕ್ಕೆ ನಿಂತ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಹಾಗಿದಲ್ಲಿ ಈಗಿನ ಹೊಸ ಸಂಸದರು ಈ ಕಟ್ಟಡಕ್ಕೆ ತಮ್ಮ ನಿಧಿಯಿಂದ ರೂ.2.00 ಲಕ್ಷಗಲನ್ನು ಬಿಡುಗಡೆ ಮಾಡಲು ಸಿದ್ದರಿಲ್ಲದೇ ಇರುವುದರಿಂದ ಸರ್ಕಾರ ಈ ಕಟ್ಟಡಕ್ಕೆ ವಿಶೇಷ ಅನುದಾನವಾಗಿ 2.00 ಲಕ್ಷರೂ.ಗಳನ್ನು ಬಿಡುಗಡೆ ಮಾಡಿ ಅರ್ಧಕ್ಕೆ ನಿಂತ ಕೆಲಸವನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀಮತಿ ರಾಣಿಸತೀಶ್ (ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಜ್ಯ ಸಚಿವರು) :—

ಅ) ಈ ಸಾಲಿನಲ್ಲಿ ಒಟ್ಟು 10.00 ಲಕ್ಷಗಳು ಮಾತ್ರ

ಅ) 94 (ತೊಂಬತ್ನಾಲ್ಕು)

ಇ) ಬಂದಿದೆ.

ಈ) ಹೌದು, ಸರ್ಕಾರದ ಆದೇಶ ಸಂಖ್ಯೆ ಸಂಕಿ 721 ಕಸಭ 97, ದಿ.24.12.97ರಲ್ಲಿ ರೂ. 50,000-00ಗಳನ್ನು ಮಂಜೂರು ಮಾಡಲಾಗಿದೆ.

ಉ) ಅ) ಇಲ್ಲ

ಆ) ಬೆಳಗಾವಿ ಜಿಲ್ಲಾ, ಜಿಲ್ಲಾಧಿಕಾರಿಗಳವರ ಕಛೇರಿಗೆ ಬಯಲುರಂಗಮಂದಿರ ನಿರ್ಮಾಣಕ್ಕೆಂದು ರೂ. 2.00 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಪತ್ರ ಬಂದಿರುವುದಿಲ್ಲ.

ಊ) ಪರಿಶೀಲಿಸಲಾಗುವುದು.

ಕಿತ್ತೂರು ಚೆನ್ನಮ್ಮ ಸಮಾಧಿ ರಸ್ತೆ ಕೆಲಸವನ್ನು ಪೂರ್ಣಗೊಳಿಸುವುದು.

2234 (2705) ಶ್ರೀ ಕೌಜಲಗಿ ಮಹಾಂತೇಶ ಶಿವಾನಂದ (ಬೈಲಹೊಂಗಲ) :— ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕೇಂದ್ರ ಸರ್ಕಾರ ಸಿಆರ್‌ಎಫ್ ಫಂಡಿನಲ್ಲಿ ಬೆಳಗಾಂ ಜಿಲ್ಲೆ, ಬೈಲಹೊಂಗಲ ತಾಲ್ಲೂಕಿನಲ್ಲಿ ಕಿತ್ತೂರು ಚೆನ್ನಮ್ಮ ಸಮಾಧಿ ರಸ್ತೆ ಹಾಗೂ ಜತ್ ಜಂಬೋಟ್ ರಸ್ತೆ ನಿರ್ಮಿಸಲು ಪತ್ರ ಸಂ.ಎಸ್.ಎನ್‌ಹೆಚ್. 28021:39:ಕೆಎಸ್‌ಟಿ:ಒಆರ್ ದಿನಾಂಕ : 2-11-1999ರ ಪ್ರಕಾರ 175 ಲಕ್ಷಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿದ ಸಂಗತಿ ನಿಜವೇ?

ಆ) ರಾಜ್ಯ ಸರ್ಕಾರ ಪ್ರಥಮ ಹಂತವಾಗಿ ರೂ. 66 ಲಕ್ಷಗಳಿದೆ ಎಂದು ಆಡಳಿತಾತ್ಮಕವಾಗಿ ಮಂಜೂರಾತಿ ಹಾಗ ತಾಂತ್ರಿಕ ಮಂಜೂರಾತಿಯನ್ನು ಎಂದು ನೀಡಲಾಯಿತು.

ಇ) ಕೇಂದ್ರ ಸರ್ಕಾರ 175 ಲಕ್ಷ ರೂ.ಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿದ್ದರಿಂದ ಹಾಗೂ ಈ ರಸ್ತೆಯು ಬ್ರಿಟಿಶರ ಜೊತೆಗೆ ಹೋರಾಡಿದ ವೀರ ಮಹಿಳೆ ಕಿತ್ತೂರು ಚೆನ್ನಮ್ಮ ಸಮಾಧಿಗೆ ಹೋಗುವ ಪ್ರಮುಖ ರಸ್ತೆಯಾಗಿರುವುದರಿಂದ ಉಳಿದ 109 ಲಕ್ಷ ರೂ.ಗಳಿಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿಯನ್ನು ಕೊಟ್ಟು ಕೂಡಲೇ ಕೆಲಸ ಪೂರ್ಣ ಮಾಡಿ ಮುಗಿಸಲು ಕ್ರಮ ಕೈಗೊಳ್ಳಲಾಗುವುದೇ?

ಈ) ಸಿಆರ್‌ಎಫ್ ಫಂಡಿನಲ್ಲಿ ಈಗಾಗಲೇ ಮಂಜೂರಾದ ಕೆಲಸಗಳನ್ನು ತೆಗೆದುಕೊಳ್ಳಲು ಹಣಕಾಸಿನ ತೊಂದರೆ ಏನಾದರೂ ಇರುವುದೇ?